# *11. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿರೇಗದ್ದೆ*





**ಹುಟ್ಟಿದ ಪ್ರತಿಯೊಂದು ಮಗುವೂ ಸಹ ವಿಶ್ವಮಾನವನಾಗಿ ಬೆಳೆಯಬೇಕೆಂಬ ಮಹದಾಸೆಯನ್ನು ಹೊತ್ತು ಗುರಿಯನ್ನು ಮುಟ್ಟಿಸುವತ್ತ ನಮ್ಮ ಶಾಲೆ ಕಾರ್ಯೋನ್ಮುಖವಾಗಿದೆ.**

## ಶಾಲೆಯ ಇತಿಹಾಸ :–

ನಮ್ಮ ಶಾಲೆಯು ಜನವರಿ 1960 ರಲ್ಲಿ ಪ್ರಾರಂಭವಾಗಿದ್ದು, ಕೊಠಡಿಯಿಲ್ಲದೆ ದಿ// ಶ್ರೀ ನಾಗರಾಜ್ ತಾರೋಗೊಳ್ಳಿ ಇವರ ಅಕ್ಕಿಗಿರಣಿಯ ಪಕ್ಕದ ಶೆಡ್‌ನಲ್ಲಿ ತರಗತಿಗಳನ್ನು ನಡೆಸಲಾಗುತ್ತಿತ್ತು. ಈ ಶಾಲೆಯಲ್ಲಿ ಮೊದಲು ಕರ್ತವ್ಯ ನಿರ್ವಹಿಸಿದ ಶ್ರೀ ಬ್ಯಾಪ್ಟೀಸ್ ಅಗೇರ ಮತ್ತು ಶ್ರೀ ಭಾಸ್ಕರ ಜೋಯಿಸ್‌ರವರ ಪ್ರಯತ್ನ ಹಾಗೂ ನಾಗರಾಜ್‌ರಾವ್ ಮತ್ತು ಅವರ ನೇತೃತ್ವದ ಗ್ರಾಮಸ್ಥರ ತಂಡ, ಅಂಟಿಕೆ ಪಿಂಟಿಕೆ ಮತ್ತು ನಾಟಕಗಳ ಮೂಲಕ ಹಣ ಒಟ್ಟುಗೂಡಿಸಿ 1960 ರಲ್ಲಿ ಒಂದು ಶಾಲಾ ಕೊಠಡಿಯನ್ನು ನಿರ್ಮಿಸಲಾಯಿತು.

## ಶಾಲಾ ಬೋಧನಾ ಮಾಧ್ಯಮ ಮತ್ತು ವಿದ್ಯಾರ್ಥಿಗಳ ಸಂಖ್ಯೆ :–

ಮೊದಲಿಗೆ ಕೇವಲ 1 ರಿಂದ 4 ನೇ ತರಗತಿಯವರೆಗೆ ನಡೆಯುತ್ತಿದ್ದ ಶಾಲೆಯು ಮುಂದಿನ ದಿನಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಯಾಗಿ ನಂತರ 2015–16 ನೇ ಸಾಲಿನಿಂದ ಉನ್ನತೀಕರಿಸಿದ ಶಾಲೆಯಾಗಿ 8 ನೇ ತರಗತಿಯನ್ನು ಪ್ರಾರಂಭಿಸಲಾಯಿತು. 2013–14 ನೇ ಸಾಲಿನಿಂದ ಸ್ಥಳೀಯ ಸಂಸ್ಥೆಗಳು ಜನಪ್ರತಿನಿಧಿಗಳು ಹಾಗೂ ಎಸ್‌ಡಿಎಮ್‌ಸಿಯವರ ಸತತ ಪ್ರಯತ್ನದ ಫಲವಾಗಿ 6 ನೇ ತರಗತಿಯಿಂದ ಆಂಗ್ಲ ಮಾಧ್ಯಮ ಪ್ರಾರಂಭಿಸಲಾಯಿತು. ವಿದ್ಯಾರ್ಥಿಗಳ ಸಂಖ್ಯೆಯೂ ಸಹಾ ಏರುಗತಿಯಲ್ಲಿ ಸಾಗುತ್ತಿದ್ದು, 2016–17 ನೇ ಸಾಲಿನಲ್ಲಿ 101, 2017–18 ನೇ ಸಾಲಿನಲ್ಲಿ 110, 2018–19 ನೇ ಸಾಲಿನಲ್ಲಿ 129, 2019–20 ನೇ ಸಾಲಿನಲ್ಲಿ 127 ಇದ್ದು ಯಾವುದೇ ಖಾಸಗಿ ವಿದ್ಯಾಸಂಸ್ಥೆಗೂ ಪೈಪೋಟಿ ನೀಡಲು ಸಜ್ಜಾಗಿದೆ.













**ಶಾಲಾ ಮೈದಾನ ಮತ್ತು ಹೂದೋಟ: –** ಮಕ್ಕಳಿಗೆ ಸಹಪಠ್ಯ ಚಟುವಟಿಕೆಗಳಲ್ಲಿ ಒಂದಾದ ಕ್ರೀಡೆಗೆ ಪ್ರೋತ್ಸಾಹ ನೀಡಲು ವಿಶಾಲವಾದ ಆಟದ ಮೈದಾನವಿದೆ. ಹಾಗೆಯೇ ಮಕ್ಕಳೇ ನಿರ್ಮಿಸಿದ ಸುಂದರವಾದ ಶಾಲಾ ಕೈದೋಟವನ್ನು ಹೊಂದಿದೆ.

**ಕೊಠಡಿಗಳು ಮತ್ತು ಶಿಕ್ಷಕರು:–** ಶಾಲೆಯಲ್ಲಿ ಮುಖ್ಯಶಿಕ್ಷಕರ ಪ್ರತ್ಯೇಕ ಕೊಠಡಿ ಇರುತ್ತದೆ. ಹಾಗೂ ಆರು ತರಗತಿ ಕೊಠಡಿಗಳಿರುತ್ತವೆ. ಅಲ್ಲದೆ ಒಬ್ಬರು ಮುಖ್ಯಶಿಕ್ಷಕರು, ಐದು ಜನ ಸಹಶಿಕ್ಷಕರು ಸೇರಿದಂತೆ ಒಟ್ಟು ಆರು ಜನ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

**ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ :–** ಶಾಲೆಗೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ಶಾಲಾ ಕಾಂಪೌಂಡ್ ಒಳಗೆಯೇ ಜಿಲ್ಲಾ ಪಂಚಾಯಿತಿ ಅನುದಾನದಲ್ಲಿ ತೆರೆದ ಬಾವಿ ತೆಗೆಸಲಾಗಿದೆ. ಹಾಗೂ ಮಕ್ಕಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಕೆಂಟ್‌ನ ಮೂರು ಫಿಲ್ಟರ್‌ಗಳನ್ನು ವ್ಯವಸ್ಥೆ

ಅಳವಡಿಸಲಾಗಿದೆ. ಪ್ರತಿಯೊಂದು ಫಿಲ್ಟರ್‌ಗಳ ಬೆಲೆ ತಲಾ ಮೂರು ಸಾವಿರ ರೂಪಾಯಿಗಳಾಗಿದ್ದು, ದಾನಿಗಳಿಂದ ಪಡೆಯಲಾಗಿದೆ. ಹಾಗೆಯೇ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಹಾಗೂ ಹೆಣ್ಣು ಮಕ್ಕಳ ವಿಶೇಷ ಶೌಚಾಲಯ ಮತ್ತು ಅಂಗವಿಕಲ ಮಕ್ಕಳ ವಿಶೇಷ ಶೌಚಾಲಯ ವ್ಯವಸ್ಥೆ ಕಲ್ಪಿಸಲಾಗಿದೆ.

**ವಿಜ್ಞಾನ ಮತ್ತು ಗಣಿತ ಉಪಕರಣಗಳು :-** ಮಕ್ಕಳಿಗೆ ವೈಜ್ಞಾನಿಕ ಪ್ರಯೋಗಕ್ಕೆ ಉಪಯೋಗಿಸುವಂತಹ ಅನೇಕ ರಾಸಾಯನಿಕ ವಸ್ತುಗಳು ಹಾಗೂ ಉಪಕರಣಗಳು ಲಭ್ಯವಿರುತ್ತವೆ. ಗಣಿತ ಕಿಟ್ ಸಹ ಶಾಲಾ ಮಕ್ಕಳಿಗೆ ಉಪಯೋಗಿಸಲು ಲಭ್ಯವಿದೆ.

**ಗ್ರಂಥಾಲಯ ಮತ್ತು ಕಂಪ್ಯೂಟರ್ ವ್ಯವಸ್ಥೆ :-** ಶಾಲೆಯಲ್ಲಿ ಸುಸಜ್ಜಿತವಾದ ಗ್ರಂಥಾಲಯ ಪುಸ್ತಕಗಳ ವ್ಯವಸ್ಥೆ ಇದ್ದು, ಸುಮಾರು ಮೂರು ಸಾವಿರ ಪುಸ್ತಕಗಳು ಲಭ್ಯವಿರುತ್ತವೆ. ಹಾಗೆಯೇ ಕಂಪ್ಯೂಟರ್ ವ್ಯವಸ್ಥೆಯೂ ಸಹ ಇರುತ್ತದೆ.

**ಶಾಲೆಯಲ್ಲಿ ನಡೆದಿರುವ ವಿಶೇಷ ಕಾರ್ಯಕ್ರಮಗಳು:-** ಶಾಲೆಯಲ್ಲಿ ಪಠ್ಯ ಚಟುವಟಿಕೆಗಳಿಗೆ ಪೂರಕವಾಗಿ ಇಂಗ್ಲಿಷ್ ಮೇಳ, ಸಂತೆಮೇಳ ಹಾಗೂ ವನಮಹೋತ್ಸವ ಮತ್ತು 2014-15 ರಲ್ಲಿ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗಿದೆ.

**ಸಂತೆ ಮೇಳ ಮತ್ತು ಇಂಗ್ಲಿಷ್ ಮೇಳ 2017-18**




**ವನಮಹೋತ್ಸವ ಕಾರ್ಯಕ್ರಮ 2019-20**



## ಎಸ್ ಡಿ ಎಮ್ ಸಿ ಮತ್ತು ಸಮುದಾಯದ ಪಾತ್ರ

ಎಸ್‌ಡಿಎಮ್‌ಸಿ ರಚನೆಯಾದ ಇಲ್ಲಿಯವರೆಗೆ ಶಾಲೆಯ ಮತು ಇಲಾಖೆಯ ಎಲ್ಲಾ ಕಾರ್ಯಚಟುವಟಿಕೆಗಳಿಗೆ ಶಿಕ್ಷಕರ ಜೊತೆಗೆ ಬೆನ್ನೆಲುಬಾಗಿ ನಿಂತಿದ್ದು, ಕ್ಲಸ್ಟರ್ ಹಂತದಲ್ಲಿ ಈವರೆಗೆ ಐದಾರು ಬಾರಿ ಪ್ರತಿಭಾ ಕಾರಂಜಿ ಕಾರ್ಯಕ್ರಮ ಹಾಗೂ 2016-17 ನೇ ಸಾಲಿನ ಕೊಂಡ್ಲೂರು, ಅರಳಸುರಳಿ ಮತು ಹಿರೇಗದ್ದೆ ಕ್ಲಸ್ಟರ್‌ಗಳ ಕ್ರೀಡಾಕೂಟವನ್ನು ನಮ್ಮ ಶಾಲೆಯಲ್ಲಿ ಸಮುದಾಯದ ಸಹಭಾಗಿತ್ವದೊದಿಗೆ ಯಶಸ್ವಿಯಾಗಿ ನಡೆಸಲಾಗಿದೆ.

## ಶಾಲೆಯ ಸಾಧನೆಗಳು ಮತ್ತು ಪ್ರಶಸ್ತಿಗಳು:–

ಈ ಶಾಲೆಯಲ್ಲಿ ಓದಿರುವ ವಿದ್ಯಾರ್ಥಿಗಳು ಸಮಾಜದಲ್ಲಿ ಅತುತ್ತಮ ಹುದ್ದೆಗಳಲ್ಲಿದ್ದು ಶಾಲೆಗೆ ಕೀರ್ತಿ ತಂದಿರುತ್ತಾರೆ. ನಮ್ಮ ಶಾಲೆಯು 2017–18 ನೇ ಸಾಲಿನಲ್ಲಿ ಕ್ಲಸ್ಟರ್‌ನ **ಅತ್ಯುತ್ತಮ ಶಾಲೆ** ಪ್ರಶಸ್ತಿಯನ್ನು ಪಡೆದುಕೊಂಡಿದೆ.ನಮ್ಮ ಶಾಲೆಯ ಮಕ್ಕಳು ಸತತವಾಗಿ ಮೂರು ವರ್ಷ, 2017–18, 2018–19, 2019–20 ರಲ್ಲಿ 14 ವರ್ಷದೊಳಗಿನ ಬಾಲಕ–ಬಾಲಕಿಯರ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿಯನ್ನು ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ.



ಅಲ್ಲದೇ 2019–20 ಸಾಲಿನ ಕ್ರೀಡಾಕೂಟದಲ್ಲಿ ನಮ್ಮ ಶಾಲೆಯ ಕುಮಾರಿ ಸಿಂಚನಾ ತಾಲ್ಲೂಕು ಮಟ್ಟದಲ್ಲಿ ಹೈಜಂಪ್‌ನಲ್ಲಿ ಪ್ರಥಮ ಮತ್ತು ಲಾಂಗ್‌ಜಂಪ್‌ನಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ. ಅಲ್ಲದೆ ನಮ್ಮ ಶಾಲೆಯ ಇನ್ನೋರ್ವ ವಿದ್ಯಾರ್ಥಿನಿ ಕುಮಾರಿ ಸಾನಿಕಾ 200 ಮೀ ಓಟದಲಿದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತಾರೆ.ಶಿವಮೊಗ್ಗದಲ್ಲಿ ನಡೆದ ಜಿಲ್ಲಾಮಟ್ಟದ ಹೈಜಂಪ್‌ನಲ್ಲಿ ಕುಮಾರಿ ಸಿಂಚನಾ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ತಲುಪಿ ಶಾಲೆಗೆ ತಾಲ್ಲೂಕಿಗೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿರುತ್ತಾಳೆ.

## ದಾನಿಗಳಿಂದ ಕೊಡುಗೆಗಳು :–

ನಮ್ಮ ಶಾಲಾ ಮಕ್ಕಳ ಶೈಕ್ಷಣಿಕ ಚಟುವಟಿಕೆ ಮತ್ತು ಪ್ರಗತಿಗೆ ಸಮುದಾಯದ ಸಹಾಯ ಅತ್ಯಗತ್ಯವಾಗಿದ್ದು ಈ ನಿಟ್ಟಿನಲ್ಲಿ ಬೇರೆ ಬೇರೆ ಸಂಘಸಂಸ್ಥೆಗಳು ದಾನಿಗಳು ವೈಯಕ್ತಿಕವಾಗಿ ಸಹಾಯ ಮಾಡಿರುತ್ತಾರೆ. ಅವುಗಳಲ್ಲಿ ಪ್ರಮುಖವಾಗಿ

1. ಸುಮಾರು 30000 ರೂ ಬೆಲೆಯ ಮೂರು ಆಲ್ಮೆರಾಗಳನ್ನು 2016–17 ನೇ ಸಾಲಿನಲ್ಲಿ ದಾನಿಗಳು ಶಾಲೆಗೆ ನೀಡಿರುತ್ತಾರೆ.
2. **ಯೂತ್ ಫಾರ್ ಸೇವಾ ಸಂಸ್ಥೆಯವರು** ಶಾಲಾ ಮಕ್ಕಳಿಗೆ ಸುಮಾರು 20000 ರೂ ಬೆಲೆಯ ಬ್ಯಾಗ್ ಮತ್ತು ಲೇಖನ ಸಾಮಾಗ್ರಿಗಳನ್ನು ನೀಡಿರುತ್ತಾರೆ.

3. 2017–18 ನೇ ಸಾಲಿನಲ್ಲಿ ಕ್ರೀಡೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗಾಗಿ 12000 ರೂ ಬೆಲೆಯ 40 ಜೊತೆ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಕ್ರೀಡಾ ಸಮವಸ್ತ್ರಗಳನ್ನು ಹಾಗೂ ಸುಮಾರು 7200 ರೂ ಬೆಲೆಯ 18 ಜೊತೆ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಭಾಗವಹಿಸುವ ಮಕ್ಕಳಿಗಾಗಿ ಡ್ರೆಸ್‌ಗಳನ್ನು ಶಾಲೆಗೆ ದಾನಿಗಳು ನೀಡಿರುತ್ತಾರೆ.
4. 2017–18 ನೇ ಸಾಲಿನಲ್ಲಿ **ಶ್ರೀ ಶಿವನಂಜಯ್ಯ, ಎಕ್ಸಿಕ್ಯುಟಿವ್ ಡೈರೆಕಟರ್,** ಮೈಸೂರ್ ಸ್ಟಿಲ್ ವೈರ್ ಪೈಪ್ಸ್ ಅಂಡ್ ಪಾಟರೀಸ್ ಲಿಮಿಟೆಡ್ ಇವರು ಸುಮಾರು 44000 ರೂ ಬೆಲೆಯ ಬ್ಯಾಗ್‌ಗಳನ್ನು ಮಕ್ಕಳಿಗೆ ಉಚಿತವಾಗಿ ನೀಡಿರುತ್ತಾರೆ.
5. **ಜಿಂದಾಲ್ ಸಂಸ್ಥೆ, ಮುಂಬೈ** ಇವರು ಸುಮಾರು 400000 ರೂ ವೆಚ್ಚದ ಸುಸಜ್ಜಿತ ಶಾಲಾ ಕೊಠಡಿಯನ್ನು 2018–19 ರಲ್ಲಿ ನಿರ್ಮಿಸಿ ದಾನವಾಗಿ ನೀಡಿರುತ್ತಾರೆ.
6. ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಾಗಿ ಸುಮಾರು 9000 ರೂ ವೆಚ್ಚದ ಮೂರು ಕೆಂಟ್ ವಾಟರ್ ಫಿಲ್ಟರ್‌ಗಳನ್ನು ಬೀಳ್ಕೊಡುಗೆಗೊಂಡ 2016–17, 2017–18, 2018–19 ನೇ ಸಾಲುಗಳ,8 ನೇ ಶಾಲಾಮಕ್ಕಳ ಪೋಷಕರು ನೀಡಿರುತ್ತಾರೆ.
7. 2018–19 ನೇ ಸಾಲಿನಲ್ಲಿ ಸುಮಾರು 10000 ರೂ ಬೆಲೆಯ ಒಂದು ಪ್ರೊಜೆಕ್ಟರ್, ಎರಡು ಊಫರ್‌ಗಳು ಹಾಗೂ ನಾಲ್ಕು ಸ್ಪೀಕರ್‌ಗಳನ್ನು ದಾನಿಗಳಿಂದ ಪಡೆಯಲಾಗಿದೆ.
8. ಹಾಗೆಯೇ 2019–20 ನೇ ಸಾಲಿನಲ್ಲಿ ಸುಮಾರು 6000 ರೂ ಬೆಲೆಯ ಗ್ರೈಂಡರ್‌ರನ್ನು ಶಾಲಾ ಮಕ್ಕಳ ಪೋಷಕರು ಶಾಲೆಗೆ ನೀಡಿರುತ್ತಾರೆ.

## ಒಟ್ಟಾರೆ ಅಭಿಪ್ರಾಯ :–



**1969** ರಲ್ಲಿ ಪ್ರಾರಂಭವಾದ ನಮ್ಮ ಶಾಲೆಯು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯಾವುದೇ ಖಾಸಗಿ ಶಾಲೆಗೂ ಸ್ಪರ್ಧೆಯನ್ನೊಡ್ಡುವ ರೀತಿಯಲ್ಲಿ ಬೆಳವಣಿಗೆ ಹೊಂದಿದೆ. ಮಕ್ಕಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಹಾಗೂ ಸಮಾಜದಲ್ಲಿ ಮಕ್ಕಳು ಉತ್ತಮ ಪ್ರಜೆಗಳಾಗಿ ಬಾಳಿಬದುಕಲು ನಮ್ಮ ಶಾಲೆಯು ಉತ್ತಮ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ. ಇದಕ್ಕೆ ಸಾಕ್ಷಿ ಎಂಬಂತೆ ಶಾಲಾ ದಾಖಲಾತಿಯು ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಹೆಚ್ಚುತ್ತಿದೆ.